ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1178
2	ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
3	ಉತ್ತರಿಸುವ ದಿನಾಂಕ	:	23-12-2021
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೈಲ್ (ಪೈಪ್‌ಲೈನ್ ಮೂಲಕ ಅಡುಗೆ ಅನಿಲ ವಿತರಿಸುವ ಸಂಸ್ಥೆ) ಸಂಸ್ಥೆಯು ರಸ್ತೆಯ ಎರಡು ಬದಿಗಳಲ್ಲಿ ಅಗೆದು ಹಾಕಿರುವ ಜಾಗದ ನಿರ್ವಹಣೆಯನ್ನು ಮಾಡುತ್ತಿದೆಯೇ; ಇಲ್ಲವಾದಲ್ಲಿ, ಯಾರು ಮಾಡುತ್ತಿದ್ದಾರೆ; ಇದಕ್ಕೆ ತಗಲುವ ವೆಚ್ಚ ಎಷ್ಟು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಗೇಲ್‌ಗ್ಯಾಸ್ / ಗೇಲ್ ಇಂಡಿಯಾ ಸಂಸ್ಥೆಗಳು ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಸಮಯದಲ್ಲಿ ಕತ್ತರಿಸುವ ರಸ್ತೆ ಭಾಗಗಳ ಪುನಃಶ್ಚೇತನವನ್ನು ತಮ್ಮ ಸ್ವಂತ ವೆಚ್ಚದಲ್ಲಿಯೇ ಕೈಗೊಳ್ಳುವ ನಿಬಂಧನೆಯಿದ್ದು, ಗೇಲ್‌ಗ್ಯಾಸ್ ಸಂಸ್ಥೆಗಳೇ ಪುನಃಶ್ಚೇತನ / ನಿರ್ವಹಣೆಯನ್ನು ಅವರ ಸ್ವಂತ ವೆಚ್ಚದಲ್ಲಿಯೇ ಕೈಗೊಳ್ಳುತ್ತಿರುತ್ತಾರೆ.
ಆ)	ಗೈಲ್ ಸಂಸ್ಥೆಯು ಗ್ಯಾಸ್ ಲೈನ್‌ಗಳನ್ನು ನಗರದಾದ್ಯಂತ ಅಳವಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿರ್ವಹಣೆಯಲ್ಲಿರುವ ರಸ್ತೆಗಳನ್ನು ಬಳಸಿಕೊಂಡಿದ್ದು, ಸದರಿ ಸ್ಥಳವನ್ನು ಬಿಬಿಎಂಪಿಯು ಯಾವ ಆಧಾರದಲ್ಲಿ ಗೈಲ್ ಸಂಸ್ಥೆಗೆ ನೀಡಿದೆ; ಸದರಿ ಸ್ಥಳವನ್ನು ಗೈಲ್ ಸಂಸ್ಥೆಗೆ ಮಾರಾಟ ಅಥವಾ ಗುತ್ತಿಗೆ ಆಧಾರದಲ್ಲಿ ನೀಡಲಾಗಿದೆಯೇ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಸರ್ಕಾರದ ಆದೇಶ / ನಿರ್ದೇಶನಗಳಂತೆ ಒಂದು ಬಾರಿಯ ಅನುಮತಿ ಶುಲ್ಕ **(One Time Permission Charges)** ಪಡೆದು ಗೇಲ್‌ಗ್ಯಾಸ್ / ಗೇಲ್ ಇಂಡಿಯಾ ಸಂಸ್ಥೆಗಳಿಗೆ ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ಬಳಸಿಕೊಳ್ಳಲು ಅನುಮತಿ ನೀಡಲಾಗುತ್ತಿರುತ್ತದೆ. ಗ್ಯಾಸ್ ಕೊಳವೆ ಅಳವಡಿಸುವ ರಸ್ತೆ ಭಾಗಗಳನ್ನು ಗೇಲ್‌ಗ್ಯಾಸ್/ಗೇಲ್ ಇಂಡಿಯಾ ಸಂಸ್ಥೆಗಳಿಗೆ ಮಾರಾಟ ಅಥವಾ ಗುತ್ತಿಗೆ ಆಧಾರದಲ್ಲಿ ನೀಡಿರುವುದಿಲ್ಲ ಮತ್ತು ಗ್ಯಾಸ್ ಕೊಳವೆ ಅಳವಡಿಸಿದ ನಂತರ ಗೇಲ್‌ಗ್ಯಾಸ್ ಸಂಸ್ಥೆಗಳೇ ದುರಸ್ಥಿಪಡಿಸಿ, ಸಾರ್ವಜನಿಕರ ಉಪಯೋಗಕ್ಕಾಗಿ ಪಾಲಿಕೆಗೆ ಮರು ಹಸ್ತಾಂತರಿಸಲಾಗುತ್ತದೆ.
ಇ)	ಬಿಬಿಎಂಪಿಯ ಆಸ್ತಿಯನ್ನು ಗ್ಯಾಸ್ ಪೈಪ್‌ಲೈನ್‌ಗಳನ್ನು ಅಳವಡಿಸಲು ಬಳಸಿಕೊಂಡಿರುವ ಗೈಲ್ ಸಂಸ್ಥೆಯು ಸದರಿ ಜಾಗವನ್ನು ಖಾಯಂ ಆಗಿ ಉಪಯೋಗಿಸುತ್ತಿದ್ದು, ಈ ಕಾರಣಕ್ಕೆ ಎಷ್ಟು ಮೊತ್ತವನ್ನು ಬಿಬಿಎಂಪಿಗೆ ಬಾಡಿಗೆ ರೂಪದಲ್ಲಿ ನೀಡುತ್ತಿದೆ; ಪ್ರತಿ ಕಿ.ಮೀ.ಗೆ ನಿಗಧಿಪಡಿಸಿದ ಸ್ಥಳ ಬಾಡಿಗೆ ಮೊತ್ತವೆಷ್ಟು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳಲ್ಲಿ ಸರ್ಕಾರದ ಆದೇಶ/ ನಿರ್ದೇಶನಗಳಂತೆ ಒಂದು ಬಾರಿಯ ಅನುಮತಿ **(One Time Permission Charges)** ಶುಲ್ಕ ಪಡೆದು ಗೇಲ್‌ಗ್ಯಾಸ್/ಗೇಲ್ ಇಂಡಿಯಾ ಸಂಸ್ಥೆಗಳಿಗೆ ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ಬಳಸಿಕೊಳ್ಳಲು ಅನುಮತಿ ನೀಡಲಾಗುತ್ತಿದ್ದು, ಅನುಮತಿ ಶುಲ್ಕದ ವಿವರವು ಈ ಕೆಳಕಂಡಂತೆ ಇರುತ್ತದೆ. • ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯ ದಿನಾಂಕ:19.05.2015ರ High Level Committee ಸಭೆಯ ನಡವಳಿಯಂತೆ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಪ್ರತಿ ಮೀಟರ್‌ಗೆ ರೂ. 1200.00 ಗಳನ್ನು (ಮೇಲ್ವಿಚಾರಣಾ ಶುಲ್ಕ ಸೇರಿ) ನಿಗಧಿಪಡಿಸಿದೆ. ಸಭೆಯ ನಡವಳಿಯನ್ನು **ಅನುಬಂಧ-1ರಲ್ಲಿ ನೀಡಿದೆ.**

...2.

		. ಸರ್ಕಾರದ ಆದೇಶ ಸಂಖ್ಯೆ: ನಅಇ 210 ಎಂಎನ್‌ವೈ 2017, ದಿನಾಂಕ: 10.02.2018ರ ಆದೇಶದಂತೆ ಓಪನ್ ಟ್ರಂಚ್ (ತೆರೆದ ಕಂದಕ) ಮಾದರಿಯಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಪ್ರತಿ ಮೀಟರ್‌ಗೆ ರೂ. 1857.00 ಗಳೊಂದಿಗೆ ಶೇಕಡ 10% ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ನಿಗಧಿಪಡಿಸಿದೆ (**ಅನುಬಂಧ 2 ರಲ್ಲಿ ನೀಡಿದೆ**). • ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯ ದಿನಾಂಕ: 04.01.2020ರ High Level Committee ಸಭೆಯಲ್ಲಿ ದಿನಾಂಕ: 10.02.2018ರ ಸರ್ಕಾರದ ಆದೇಶದಲ್ಲಿ ಓಪನ್‌ಟ್ರಂಚ್ (ತೆರೆದ ಕಂದಕ) ಮಾದರಿಗೆ ಪ್ರತಿ ಮೀಟರ್ ಒಂದಕ್ಕೆ ವಿಧಿಸಿರುವ ರೂ.1857.00 ಗಳೊಂದಿಗೆ, ಹೆಚ್.ಡಿ.ಡಿ ಮಾದರಿಯಲ್ಲಿ ಅಳವಡಿಸುವ ಗ್ಯಾಸ್ ಪೈಪ್‌ಲೈನ್‌ನ ಪ್ರತಿ ಮೀಟರ್‌ಗೆ ರೂ. 700.00ಗಳಿಗೆ ನಿಗಧಿಪಡಿಸಲು ತೀರ್ಮಾನಿಸಲಾಗಿತ್ತು. (ನಡವಳಿ ಪ್ರತಿಯನ್ನು **ಅನುಬಂಧ-3 ರಲ್ಲಿ ನೀಡಿದೆ**). • ನಂತರ ಸರ್ಕಾರದ ದಿನಾಂಕ: 24.02.2020ರ ತಿದ್ದುಪಡಿ ಆದೇಶದಲ್ಲಿ ಗ್ಯಾಸ್ ಪೈಪ್‌ಲೈನ್‌ನ್ನು ಹೆಚ್.ಡಿ.ಡಿ ಮಾದರಿಯಲ್ಲಿ ಅಳವಡಿಸಿದ್ದಲ್ಲಿ ಪ್ರತಿ ಮೀಟರ್‌ಗೆ ರೂ.700.00 ಗಳ ಅನುಮತಿ ಶುಲ್ಕವನ್ನು ಮತ್ತು ರೂ. 100.00 ಮೇಲ್ವಿಚಾರಣಾ ಶುಲ್ಕವನ್ನು ಪಡೆಯಲು ಆದೇಶಿಸಲಾಗಿರುತ್ತದೆ (ಆದೇಶ ಪ್ರತಿಯನ್ನು **ಅನುಬಂಧ-4 ರಲ್ಲಿ ನೀಡಿದೆ**).
ಈ)	ಕಳೆದ ಮೂರು ವರ್ಷಗಳಲ್ಲಿ ಗೈಲ್ ಸಂಸ್ಥೆಯು ಗ್ಯಾಸ್ ಪೈಪ್ ಲೈನ್‌ಗಳನ್ನು ಅಳವಡಿಸಲು ಬಳಸಿಕೊಂಡಿರುವ ಸ್ಥಳಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಗೆ ಪಾವತಿಸಿರುವ ಸ್ಥಳ ತೆರಿಗೆ ಮೊತ್ತವೆಷ್ಟು? (ವಿವರ ನೀಡುವುದು)	2016-17ನೇ ಸಾಲಿನಿಂದ ಪಾಲಿಕೆ ವೆಬ್‌ಸೈಟ್‌ನ ಆನ್‌ಲೈನ್ ವೇದಿಕೆ **Multi Agency Road Cutting Co-Ordination System (MARCCS)** ಅಡಿಯಲ್ಲಿ ಗೇಲ್‌ಗ್ಯಾಸ್/ಗೇಲ್ ಇಂಡಿಯಾ ಸಂಸ್ಥೆಗಳಿಗೆ ಕೊಳವೆ ಅಳವಡಿಸಲು ಒಂದು ಬಾರಿಯ ಅನುಮತಿ ಶುಲ್ಕ **(One Time Permission Charges)** ಪಡೆದು ಅನುಮತಿ ನೀಡುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅನುಮತಿಯನ್ನು ನೀಡಿದ ನಂತರ ಪ್ರಸ್ತುತ ಸದರಿ ಸ್ಥಳಕ್ಕೆ ಯಾವುದೇ ತೆರಿಗೆ ವಿಧಿಸುವ ನೀತಿ / ನಿಯಮ / ಆದೇಶ ಅಳವಡಿಸಿರುವುದಿಲ್ಲ. ಒಂದು ಬಾರಿಯ ಅನುಮತಿ ಶುಲ್ಕ **(One Time Permission Charges)** ಪಡೆದು ಅನುಮತಿ ನೀಡಿರುವ ಪ್ರಕರಣಗಳಲ್ಲಿ ಗೇಲ್‌ಗ್ಯಾಸ್ / ಗೇಲ್ ಇಂಡಿಯಾ ಸಂಸ್ಥೆಗಳು 2016-17ನೇ ಸಾಲಿನಿಂದ ಪಾಲಿಕೆಗೆ ಪಾವತಿಸಿರುವ ಮೊತ್ತದ ವಿವರವನ್ನು **ಅನುಬಂಧ-5 ರಲ್ಲಿ ನೀಡಿದೆ.**

ನಅಇ 381 ಎಂಎನ್‌ವೈ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

[illegible] 1178

ಅನುಬಂಧ-1

Proceedings of the High Level Committee Meeting regarding Development of City Gas Distribution in Bengaluru held on 19th May 2015 At 11.30 am in the Committee Room, Vidhana Soudha under the Chairmanship of the Chief Secretary to Government of Karnataka

MEMBERS PRESENT : As per annexure attached

1. The Principal Secretary, Infrastructure Development Dept welcomed the Chief Secretary, Development Commissioner, Additional Chief Secretaries, Principal Secretaries, CEO of GAIL Gas Limited and other officers present in the meeting and initiated the discussions.

2. The Principal Secretary, IDD informed that this meeting has been convened to discuss the timely implementation of the City Gas Distribution project, which is a priority project for Bangalore city. since the project envisages 24X7 availability of natural gas to various categories of consumers such as industrial, commercial, domestic households and transport sectors, besides bringing down the pollution level. She requested all the departments / agencies to extend full support by providing all the required clearances / approvals at the earliest, to ensure that the project is completed within the scheduled time frame.

3. The General Manager, GAIL Gas Limited made a brief presentation on the project. The highlights of the project are :

    Total cost of the project : Rs. 1,270 crore
    Total number of pipeline connections : 2.40 lakh connections
    Total length of pipeline : 1350 km
    Time frame : Next Five years
    Jurisdiction covered: Bangalore Rural and Urban districts
    Performance given by GAIL Gas Ltd to PNGRB : Rs 5,200 crore

4. Emphasising the need to implement the project within the time limit prescribed by the Petroleum and Natural Gas Regulatory Board

[PNGRB], the CEO, GAIL Gas Ltd requested the State authorities to facilitate to complete the project within the scheduled period, citing the instances of Mumbai and Delhi, wherein certain incentives were provided by the authorities / Government for developing the gas infrastructure which included nominal charges as pipe laying charge during the initial period of City Gas Distribution.

5. **Permission for laying pipeline in BBMP / BDA / BWSSB jurisdictions:**

The details of applications made to BBMP and BDA for permission to lay the gas pipeline infrastructure in the respective jurisdictions was presented. The CEO, GAIL Gas Ltd requested for early grant of permissions, so that the work could be taken up and completed as per schedule. Considering the importance of the project, the authorities of BBMP and BDA agreed to accord all required permissions to project by 31.05.2015.

6. **Permission & Restoration charges levied by BBMP & BDA:**

CEO, GAIL Gas informed that the rates of gas pipeline laying charges levied by BBMP at Rs.3,600/running meter [excluding the road restoration charges] are very high and it is about **four times the actual pipe laying cost** itself. He informed that the gas pipeline will be laid on the service road / under footpath / under the shoulders; and while crossing the roads, the pipes will not be laid by the "Open Cut Method", but will be done by "Horizontal Direction Drilling (HDD)". Since it is an infrastructure project, he requested for the reduction in charges to make the project viable.

7. The Administrator and Commissioner of BBMP informed that the charges for pipe laying including road restoration would amount to Rs.6,000/running meter.

8. The CEO, GAIL Gas Ltd informed that considering the revised charges of Rs.6,000/running meter (including the restoration charges), the total cost for this alone would work out to about Rs.720 crore [about 57%] of the total project cost of Rs.1,270 crore. With this, the project cost would shoot up to about Rs. 2,000 crore.

9. Detailed discussions were held regarding the charges being levied by BBMP and BDA. The Chief Secretary said that as this is a project for development of good infrastructure in the city and will benefit different sectors of consumers including industry, domestic and transport sector, besides reducing the level of pollution, it is not justifiable for BBMP/BDA to rely upon such sources to boost its income. He felt that BBMP/BDA need to consider it as a **special case** and levy a reasonable rate for giving the permission & pipe laying charges. He further mentioned that the primary source of income for BBMP is through the house tax collection and augmentation of income cannot be loaded onto such infrastructure projects that are public in nature.

10. After detailed deliberations, the committee resolved that:

a) BBMP & BDA to charge Rs.1,200/ per running meter as pipe laying and supervision charges for GAIL Gas project.

b) Road restoration work to be carried out by GAIL Gas Ltd as per the specifications provided by BBMP / BDA.

c) Road restoration to be completed within 15 days and no trench along any stretch of road should be left open or left without restoration for more than 15 days unless specially permitted by BBMP/BDA.

d) If there is delay in restoration or the quality of work is not maintained as per the specifications given by BBMP / BDA, then necessary

notice could be issued for compliance, failing which action could be initiated.

e) Along the Tender Sure roads, GAIL Gas should utilize the provision made for gas pipeline in the utility chamber.

11. **Implementation Plan for CNG:**

CEO, GAIL Gas Ltd requested for allotment of land by BDA/ BBMP along the ORR for CNG Mother Stations / daughter stations. The representative of BDA informed that three sites were selected in HBR Layout area but they have been notified as lake land. The Chief Secretary suggested that alternate sites should be identified for CNG stations by BDA and BBMP immediately.

12. CEO, GAIL Gas Ltd requested for allotment of land near Dobbospet Industrial Area for setting up CNG Station/ware house and the Commissioner for Industrial Development and CEO & EM, KIADB agreed to examine the same on receipt of details from GAIL Gas.

13. Regarding connectivity to Dobbospet, etc., the Deputy Commissioners of Bengaluru (Urban & Rural) Districts agreed to extend all the assistance. In addition, they would also examine the availability of lands for the stations.

14. The Chief Secretary advised the Principal Secretary, IDD to convene a meeting with the officers of KIADB / BDA / BBMP for identification and allotment of land, on priority basis.

15. **Introduction of CNG in Bangalore:**

The CEO, GAIL Gas Ltd informed that they have applied to BMTC for allotting plots in three BMTC bus depots (i.e., Peenya, Sumanhalli and

Hennur) and that the same has been approved by the Board of BMTC; that GAIL Gas has already started laying of steel pipeline in Peenya and the detailed engineering for these three BMTC depots is in the advanced stage. Regarding induction of CNG buses into BMTC, the Additional Chief Secretary, Transport Department informed that conversion of the existing buses to CNG based buses (retrofitting) is not a feasible solution, based on the experience of Mumbai and Pune Transport services. Instead, new CNG buses would be better & economical.

16. He also informed that the cost of low floor level CNG buses is almost double the cost of similar diesel buses. Hence, fresh tenders have to be invited for normal floor level buses, wherein, the cost may be higher by Rs.3-5 lakhs/bus. It was also informed that the operation cost is about 10-15% more compared to the diesel buses. The Additional Chief Secretary, Transport Department also informed that the Board of BMTC has taken a decision to procure CNG based buses in a phased manner (50% annualised replacement) with the financial support from the State Government [for both CAPEX and OPEX].

17. The Additional Chief Secretary, Forest, Ecology & Environment informed that KSPCB and BMTC were present during the hearing held in the Hon'ble High Court on the pollution level in Bangalore, and that the Hon'ble High Court has directed BMTC for induction of CNG based buses, which has been agreed to, by BMTC.

18. The Chief Secretary felt that the essence of directions of the Hon'ble High Court is for bringing down the level of pollution in the city and that as CNG based buses have considerable financial implications, BMTC need to examine the BS-IV and BS-V models of diesel buses that have similar existing standards in comparison to CNG based buses.

19. **GAIL's REGIONAL GAS MANAGEMENT CENTRE (RGMC) at Bangalore:**

It was informed that the plot allotted to GAIL at Rachenahalli (Manyata Tech Park) by BDA earlier is under litigation and has reached a stage of final arguments. The CEO, GAIL Gas Ltd requested to consider allotment of an alternate land. The Chief Secretary suggested that BDA should properly defend the case in the Hon'ble High Court and also examine allotting an alternate land / built up area to GAIL for establishing the RGMC at Bangalore.

20. **Allotment of Land for maintenance bases / valve stations:**

CEO, GAIL Gas Ltd requested for allotment of suitable land by BDA / BBMP / KSIIDC / KIADB for setting up the DRS stations / valve stations / maintenance base en-route the pipelines. The Chief Secretary enquired the size of plots required for these stations and the CEO informed that these are of small sizes. The Chief Secretary advised all concerned to identify such plots and inform GAIL Gas Ltd to examine their suitability.

21. **Formation of JV Company**

CEO, GAIL Gas informed that the revised Shareholders' Agreement has been submitted to KSIIDC for approval on 15.5.2015. He also mentioned that considering the huge capital investment and performance guarantee, this JVC proposes to hold only a minor equity in the main company that will be implementing CGD (GAIL Gas & its consortium members).

22. **Exemption / reduction of Entry tax/ VAT for CNG & PNG**

CEO, GAIL Gas Ltd requested to review the present rate of Entry Tax @ 5% and VAT @ 14.5% on CNG and Domestic PNG in line with that applicable in the State of Delhi (VAT : 0% on CNG and 5% on Domestic PNG; Entry Tax is 0%). The Principal Secretary, Finance Dept informed that the entry tax is getting merged with the GST and cannot be altered at

this stage. Regarding the VAT, GAIL Gas was asked to respond to the queries raised by the Finance Department and based on its reply, a decision would be taken favourably.

23. **Permission for Last Mile Connectivity Works:**

It was informed that various last mile connectivity issues are pending due to various reasons such as opposition from the local Gram Panchayats, BBMP etc. The Chief Secretary observed that guidelines framed by the High Level Committee in this meeting are applicable for all others also and they should be enforced by the concerned agencies.

24. Regarding the permission to the last mile connectivity works in ITPL, Hoskote, Dabbaspet, the Chief Secretary directed all the concerned (BBMP, BDA, NHAI, DCs including Gram Panchayat, etc) to endeavour for providing necessary clearances and approvals at the earliest. Further necessary help during the execution or implementation of the works need to be provided by all the agencies including Police Department.

The meeting ended with the thanks to the Chair.

[KAUSHIK MUKHERJEE]
Chief Secretary

Annexure

Members present in the Progress Review Meeting of City Gas Distribution held on 19.05.2015 at 11:30 A.M. in room no. 313, Vidhana Soudha under the Chairmanship of the Chief Secretary, Govt. of Karnataka.

Sl. No.	Name & Designation	
1.	Sri Kaushik Mukherjee, IAS, Chief Secretary, Govt. of Karnataka	In Chair
2.	Smt. Latha Krishna Rao, IAS, Additional Chief Secretary & Development Commissioner, Govt. of Karnataka	
3.	Sri T.M.Vijaya Bhaskar, IAS Administrator, BBMP	
4.	Sri P.Ravi Kumar, IAS Additional Chief Secretary, Transport Dept.	
5.	Sri M. Madan Gopal, IAS, Additional Chief Secretary, Forest, Environment and Ecology Dept.	
6.	Sri I.S.N.Prasad, IAS, Principal Secretary to Govt., Finance Department	
7.	Smt. Vandita Sharma, IAS, Principal Secretary to Govt., Infrastructure Development Department	
8.	Sri G.Kumar Naik, IAS, Commissioner, BBMP	
9.	Sri Gaurav Gupta, IAS, Commissioner, C&I Dept.	
10.	Sri Ritvik Pandy, IAS, Commissioner, Commercial Taxes Dept.	
11.	Sri Ramachandra, Secretary (Environment), Forest, Environment and Ecology Dept	
12.	Sri Prakash.H.P, IFS, MD, (Land Army) KRIDL	
13.	Sri K.B.Kulkarni, Deputy Secretary, PWD	
14.	Sri J.Prasada Reddy, DGOI (T), NHAI	
15.	Sri N. Chandrasekhar, Director (PPP Cell), Infrastructure Development Department	
16.	Sri P.K.Pal, CEO, GAIL Gas Ltd.	
17.	Sri Rathna Kumar, C.E, KRIDL	
18.	Sri D.Ramegowda, CE, BBMP	
19.	Sri Chandrakanth.D, C.E, KPCL	
20.	Sri N.R.N.Simha, GM, KSIIDC	

Sl. No.	Name & Designation
21.	Sri C.G.Anand, GM (Tech), BMTC
22.	Sri Vijaya Kumar, Member Secretary, KSPCB
23.	Sri K.T.Nagaraja, S.E(Road Infra), BBMP
24.	Sri Nagaraju, (DFC), BBMP
25.	Sri B.R.Jayashankara Reddy, BDA
26.	Sri Krishna Murthy.k.N, KRIDL
27.	Sri H.V.Manjunath, D.D. (Food), Bangalore Rural
28.	Sri S.N.Kumar, GM, GAIL Gas Ltd.
29.	Sri B.K.Pavithra, EO-II, BDA
30.	Sri Haveri.S, E.E, KPCL
31.	Sri K.V.Ramesh, Deputy Director, Fire and Emergency Services.
32.	Smt. Umadevi, Under Secretary, Revenue Dept.
33.	Sri Rajashekar.V.Bharatnoor, TA, KIADB
34.	Sri P.Narayana Rao, CM, GGL
35.	Sri Ajay DGM, GGL
36.	Sri Lalit Bhatt, DGM, GGL
37.	Sri T.L.Umesh, AGM, KSIIDC
38.	Sri Sunil Kumar Jha, SM, GGL
39.	Sri Shashikant Warad, Sr. Programmer, Infrastructure Development Department

ಅನುಬಂಧ-2

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗಳನ್ನು ಕತ್ತರಿಸಲು ಪಾಲಿಕೆ ವತಿಯಿಂದ ನೀಡಬೇಕಾಗಿರುವ ಅನುಮತಿ ಪ್ರಕ್ರಿಯೆಯನ್ನು ಪಾಲಿಕೆಯಲ್ಲಿ ಅಭಿವೃದ್ಧಿ ಪಡಿಸಿರುವ ತಂತ್ರಾಂಶವನ್ನು ಕಡ್ಡಾಯವಾಗಿ ಬಳಸಿ ನಿರ್ವಹಿಸುವ ಮತ್ತು ಅನಧಿಕೃತ ರಸ್ತೆ ಅಗೆತವನ್ನು ದಂಡಾರ್ಹ ನಿಯಮ ಉಲ್ಲಂಘನೆಯೆಂದು ಪರಿಗಣಿಸಿ ಜುಲ್ಮಾನೆ ನಿಗದಿಪಡಿಸುವ ಕುರಿತು.

ಓದಲಾಗಿದೆ:

1. ಆಯುಕ್ತರು, ಬೃ.ಬೆಂ.ಮ.ಪಾ ರವರ ಪತ್ರ ಸಂಖ್ಯೆ ಮು.ಅ.(ಓ.ಎಫ್.ಸಿ.ಕೋಶ)/ಪಿ.ಆರ್/802/16-17, ದಿನಾಂಕ 04-10-2018.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರ ಪತ್ರ ಸಂಖ್ಯೆ ನಅಇ 210 ಎಂಎನ್‌ವೈ 2017, ದಿನಾಂಕ 26-09-2018.
3. ಆಯುಕ್ತರು, ಬೃ.ಬೆಂ.ಮ.ಪಾ ರವರ ಪತ್ರ ಸಂಖ್ಯೆ ಮು.ಅ.(ಓ.ಎಫ್.ಸಿ.ಕೋಶ)/ಪಿ.ಆರ್/802/16-17, ದಿನಾಂಕ 14-02-2017.
4. ಕರ್ನಾಟಕದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 24-09-2016ರಂದು ನಡೆದ ವಿವಿಧ ಇಲಾಖೆಗಳ ಸಮನ್ವಯ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಪತ್ರದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಸೌಲಭ್ಯ ಒದಗಿಸುವ ಸಂಸ್ಥೆಗಳು ಮತ್ತು ಸಾರ್ವಜನಿಕರು ಪಾಲಿಕೆಯ ರಸ್ತೆಗಳನ್ನು ಕತ್ತರಿಸಲು ಪಾಲಿಕೆ ವತಿಯಿಂದ ನೀಡಬೇಕಾಗಿರುವ ಅನುಮತಿ ಪ್ರಕ್ರಿಯೆಯನ್ನು ಪಾಲಿಕೆಯಲ್ಲಿ ಅಭಿವೃದ್ಧಿ ಪಡಿಸಿರುವ ತಂತ್ರಾಂಶವನ್ನು ಕಡ್ಡಾಯವಾಗಿ ಬಳಸಿ ನಿರ್ವಹಿಸುವ ಕುರಿತು ಈ ಕೆಳಗಿನ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

i. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಸರ್ಕಾರದ ಮತ್ತು ಪಾಲಿಕೆಯ ಸ್ವಂತ ಅನುದಾನದಲ್ಲಿ ನಗರದ ಬಹುತೇಕ ಪ್ರಮುಖ ರಸ್ತೆಗಳನ್ನು ಮತ್ತು ವಾರ್ಡ್ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲಾಗಿರುತ್ತದೆ. ಹೀಗಿರುವಾಗಲೂ ಬೆಂಗಳೂರು ನಗರದ ರಸ್ತೆಗಳ ದುಃಸ್ಥಿತಿಯ ಬಗ್ಗೆ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಋಣಾತ್ಮಕ ವಿಮರ್ಶೆಗಳು ಅವ್ಯಾಹತವಾಗಿ ಕೇಳಿಬರುತ್ತವೆ.

ii. ರಸ್ತೆಗಳ ಮೇಲ್ಮೈ ಹಾಳಾಗುವುದಕ್ಕೆ ಹಲವಾರು ಕಾರಣಗಳಿವೆ. ಅಗತ್ಯ ಮೂಲಸೌಲಭ್ಯಗಳಾದ ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಇತ್ಯಾದಿಗಳನ್ನು ನಿರ್ವಹಿಸುವ ಸಂಸ್ಥೆಗಳು ಪಾಲಿಕೆ ವ್ಯಾಪ್ತಿಯಲ್ಲಿ ಆಗ್ಗಾಗ್ಗೆ ಕೈಗೆತ್ತಿಕೊಳ್ಳುವ ದುರಸ್ತಿ ಅಥವಾ ಹೊಸ ಕಾಮಗಾರಿಗಳಿಗಾಗಿ ರಸ್ತೆಗಳನ್ನು ಮತ್ತು ಪಾದಚಾರಿ ಮಾರ್ಗಗಳನ್ನು ಕತ್ತರಿಸುತ್ತವೆ. ಕೆಲವೊಮ್ಮೆ ಪಾಲಿಕೆಯಿಂದ ಈ ಬಗ್ಗೆ ಅನುಮತಿ ಕೋರದೆ ಬಹಳಷ್ಟು ಬಾರಿ ಅನುಮತಿಯಿಲ್ಲದೇ ರಸ್ತೆಗಳನ್ನು ಕತ್ತರಿಸಲಾಗುತ್ತದೆ. ಹೀಗೆ ಕತ್ತರಿಸಲ್ಪಟ್ಟ ರಸ್ತೆಗಳ ಪುನರ್ನಿರ್ಮಾಣವನ್ನು ಸದರಿ ಸಂಸ್ಥೆಗಳು ಕೈಗೊಂಡರೂ ಕೂಡ ಅಗತ್ಯವಿರುವ ಗುಣಮಟ್ಟದಲ್ಲಿ ಇಲ್ಲದಿರುವುದು ಸಾಮಾನ್ಯವಾಗಿದೆ.

ಇದರಿಂದಾಗಿ ಹೊಸದಾಗಿ ಡಾಂಬರೀಕರಣ ಮಾಡಿದ ರಸ್ತೆಗಳು ~~ಕೂಡ ಬಹಳ ಬೇಗನೇ~~ ಶೀಘ್ರವಾಗಿ ಹಾಳಾಗಿ ಸಾರ್ವಜನಿಕರ ಮತ್ತು ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯುಂಟಾಗುತ್ತದೆ. ಈ ಬಗ್ಗೆ ವ್ಯಾಪಕ ಟೀಕೆ ಮತ್ತು ವಿರೋಧ ವ್ಯಕ್ತವಾಗಿರುವುದರಿಂದ ಡಾಂಬರೀಕರಣ ಮಾಡಿ ಒಂದು ವರ್ಷದವರೆಗೆ ಯಾವುದೇ ರಸ್ತೆಗಳನ್ನು ಅಗೆಯುವುದನ್ನು ನಿರ್ಬಂಧಿಸಲಾಗಿದೆ.

iii. ಕೆಲವೊಂದು ಅನಿವಾರ್ಯ ಸಂದರ್ಭಗಳಲ್ಲಿ ರಸ್ತೆ ಕತ್ತರಿಸುವುದು ಅವಶ್ಯವಾದರೂ ಆ ರಸ್ತೆಗಳನ್ನು ಸುಗಮ ಸಂಚಾರ ಮತ್ತು ರಸ್ತೆ ಬಾಳಿಕೆಗಳ ದೃಷ್ಟಿಯಿಂದ ಅಗತ್ಯ ಗುಣಮಟ್ಟದಲ್ಲಿ ಮರು ನಿರ್ಮಾಣ ಮಾಡಬೇಕಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಮೂಲಸೌಲಭ್ಯ ಸಂಸ್ಥೆಗಳು ಕೈಗೊಳ್ಳಬೇಕಾದ ಕಾಮಗಾರಿಗೆ ವ್ಯಯಿಸಬೇಕಾದ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸುವಾಗ ಅದರಲ್ಲಿ ರಸ್ತೆಯ ಮರುನಿರ್ಮಾಣದ ವೆಚ್ಚವನ್ನು ಸೇರಿಸಿಲ್ಲದಿರುವುದು ವ್ಯಾಪಕವಾಗಿ ಕಂಡುಬರುತ್ತದೆ. ಒಂದೊಮ್ಮೆ ರಸ್ತೆ ಕತ್ತರಿಸಿದ ಭಾಗಗಳ ಮರುನಿರ್ಮಾಣವನ್ನು ಪರಿಗಣಿಸಿದ್ದರೂ ಕೂಡ ಆಯಾ ರಸ್ತೆಗಳ ಗುಣಮಟ್ಟಕ್ಕೆ ಅನುಗುಣವಾಗಿ ಮರುನಿರ್ಮಾಣ ವೆಚ್ಚವನ್ನು ಪರಿಗಣಿಸಿಲ್ಲದಿರುವುದು ಕಂಡುಬರುತ್ತದೆ. ಇದರಿಂದಾಗಿ ರಸ್ತೆ ಮರುನಿರ್ಮಾಣಕ್ಕೆ ಬೇಕಾಗುವ ವೆಚ್ಚದ ಆಂಶಿಕ ಭಾಗವನ್ನಷ್ಟೇ ವ್ಯಯಿಸಲು ಸದರಿ ಸಂಸ್ಥೆಗಳಿಗೆ ಸಾಧ್ಯವಾಗುತ್ತದೆ. ಇದು ರಸ್ತೆಯ ಬಾಳಿಕೆ ಮತ್ತು ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

iv. ಇವಲ್ಲದೇ ಪಾಲಿಕೆ ವ್ಯಾಪ್ತಿಯಲ್ಲಿ ಓ.ಎಫ್.ಸಿ. ಸಂಸ್ಥೆಗಳಿಗೆ ಆನ್‌ಲೈನ್ ಮೂಲಕ ಅನುಮತಿ ನೀಡುವ ಪ್ರಕ್ರಿಯೆಯನ್ನು ಪಾಲಿಕೆಯ ಓ.ಎಫ್.ಸಿ.–ಜಿ.ಐ.ಎಸ್. ಜಾಲತಾಣದಲ್ಲಿ ನಿರ್ವಹಿಸಲಾಗುತ್ತಿದೆ. ಸದರಿ ಆನ್‌ಲೈನ್ ಪ್ರಕ್ರಿಯೆ ಜಾರಿಯಲ್ಲಿದ್ದರೂ ಓ.ಎಫ್.ಸಿ. ಸಂಸ್ಥೆಗಳು ಹಲವು ಸಂದರ್ಭಗಳಲ್ಲಿ ಪಾಲಿಕೆಯ ಅನುಮತಿಯಿಲ್ಲದೇ ರಸ್ತೆ ಕತ್ತರಿಸುತ್ತಿದ್ದು, ಇನ್ನೂ ಕೆಲ ಸಂದರ್ಭಗಳಲ್ಲಿ ಪೂರ್ವಾನುಮತಿಯನ್ನು ಪಡೆದಿದ್ದರೂ ಕೂಡ ರಸ್ತೆಗಳ ಡಾಂಬರೀಕರಣ ಆಗುವವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಡಾಂಬರೀಕರಣ ಆದ ನಂತರ ಎಚ್ಚೆತ್ತು ಕಾಮಗಾರಿಗೋಸ್ಕರ ಡಾಂಬರೀಕರಣಗೊಂಡ ರಸ್ತೆಯನ್ನು ಕತ್ತರಿಸುತ್ತಿವೆ.

ಅಲ್ಲದೇ ಕಟ್ಟಡ ನಿರ್ಮಾಣ ಸಂಸ್ಥೆಗಳಂತಹ ಇತರ ಖಾಸಗಿ ಸಂಸ್ಥೆಗಳು ಮತ್ತು ಸಾರ್ವಜನಿಕರು ಕೂಡ ಸ್ವಂತ ಉದ್ದೇಶಗಳಿಗಾಗಿ ರಸ್ತೆಗಳನ್ನು ಪಾಲಿಕೆಯ ಅನುಮತಿಯಿಲ್ಲದೇ ಅಗೆದು ಹಾಳುಗೆಡಹುತ್ತಿರುತ್ತಾರೆ.

v. ಇವೆಲ್ಲವುಗಳ ಫಲಿತಾಂಶವಾಗಿ ಈ ರಸ್ತೆಗಳನ್ನು ನಿರ್ವಹಿಸಬೇಕಾಗಿರುವ ಪಾಲಿಕೆಯು ಅನಗತ್ಯ ದೂಷಣೆಗೆ ಗುರಿಯಾಗಿದೆ. ಅಲ್ಲದೇ ಸಾರ್ವಜನಿಕ ಸ್ವತ್ತು ಮತ್ತು ಸರಕಾರದಿಂದ ನಿವೇಶಿತ ಸಂಪನ್ಮೂಲವು ನಿರೀಕ್ಷಿತ ಉಪಯೋಗ ನೀಡದೇ ಪೋಲಾಗುತ್ತಿದೆ.

vi. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಗರ ಪ್ರದಕ್ಷಿಣೆಯಲ್ಲಿ ಸೂಚಿಸಿದಂತೆ, ಪಾಲಿಕೆಯಲ್ಲಿ ಪ್ರತೀ ತಿಂಗಳ ಮೊದಲನೇ ಮತ್ತು ಮೂರನೇ ಸೋಮವಾರಗಳಂದು ವಿವಿಧ ಮೂಲಸೌಲಭ್ಯ ಮತ್ತು ಇತರ ಇಲಾಖೆಗಳ ಮುಖ್ಯಸ್ಥರೊಂದಿಗೆ ಪಾಲಿಕೆ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮನ್ವಯ ಸಭೆ ನಡೆಸಿ ಚರ್ಚಿಸಲಾಗುತ್ತಿದೆ. ಅಲ್ಲದೇ ಪಾಲಿಕೆಯಿಂದ ರಸ್ತೆ ಕತ್ತರಿಸಲು ಅಗತ್ಯ ಅನುಮತಿ ನೀಡುವ ಪ್ರಕ್ರಿಯೆಯನ್ನು ಸರಳೀಕರಿಸಿ Single Window System ನಂತೆ ನಿರ್ವಹಿಸಲು ಪಾಲಿಕೆಯಲ್ಲಿ (MARCCS - Multi-Agency Road Cutting Coordination System) ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು ವಿವಿಧ ಇಲಾಖೆಗಳ ಮತ್ತು ಪಾಲಿಕೆಯ ಆಯ್ದ ಅಧಿಕಾರಿಗಳಿಗೆ ತಂತ್ರಾಂಶದಲ್ಲಿ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ತರಬೇತಿ ನೀಡಲಾಗಿದ್ದು ಪ್ರತ್ಯೇಕ Login ID ಮತ್ತು Password ನೀಡಲಾಗಿದೆ. ಆಯಾ ಇಲಾಖೆಯ ನೋಡಲ್ ಅಧಿಕಾರಿಗಳು ರಸ್ತೆ ಕತ್ತರಿಸುವ ಅನುಮತಿ ಪ್ರಕ್ರಿಯೆಯಲ್ಲಿ ಇಲಾಖೆಗಳನ್ನು Single Point of Contact ಆಗಿ ಪ್ರತಿನಿಧಿಸುತ್ತಾರೆ.

vii. ಮುಂದುವರೆದು, ಖಾಸಗಿ ಕಟ್ಟಡಗಳಿಗೆ ನೀರು ಮತ್ತು ವಿದ್ಯುತ್ ಸಂಪರ್ಕಗಳನ್ನು ಒದಗಿಸಲು ರಸ್ತೆ ಕತ್ತರಿಸುವ ಮನವಿಗಳನ್ನು ಪಾಲಿಕೆಯ ಜಾಲತಾಣದಲ್ಲಿ ನಿರ್ವಹಿಸುವ ಸಲುವಾಗಿ ನೂತನವಾಗಿ ನಾಗರಿಕರಿಗೆ ಪ್ರತ್ಯೇಕ ಆನ್‌ಲೈನ್ ವ್ಯವಸ್ಥೆಯನ್ನು ಸಿದ್ಧಪಡಿಸಲಾಗಿದ್ದು ಇನ್ನು ಮುಂದೆ ನಾಗರಿಕರಿಂದ ಸ್ವೀಕೃತವಾಗುವ ರಸ್ತೆ ಕತ್ತರಿಸುವ ಮನವಿಗಳನ್ನು ಆನ್‌ಲೈನ್ ಮಾದರಿಯಲ್ಲೇ ನಿರ್ವಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಸಾರ್ವಜನಿಕರು ಮತ್ತು ಖಾಸಗಿ ಸಂಸ್ಥೆಗಳು ತಮ್ಮ ಮನೆ, ವಸತಿ ಸಮುಚ್ಛಯ ಮತ್ತು ವಾಣಿಜ್ಯ ಕಟ್ಟಡಗಳ ನೀರು, ಒಳಚರಂಡಿ ಮತ್ತು ವಿದ್ಯುತ್ ಸರಬರಾಜಿಗೆ ಸಂಬಂಧಪಟ್ಟಂತೆ ರಸ್ತೆ ಕತ್ತರಿಸುವ ಮನವಿಗಳನ್ನು (ಬೆಸ್ಕಾಂ ಸಂಸ್ಥೆಯವರು ಸಾರ್ವಜನಿಕರಿಗೆ ಅನುಮತಿಸುವ Self Execution ಕಾಮಗಾರಿಗಳೂ ಸೇರಿದಂತೆ) ಸದರಿ ಜಾಲತಾಣದ ಮುಖಾಂತರ ಸಲ್ಲಿಸಬೇಕಿರುತ್ತದೆ.

viii. ಹೀಗೆ ಪಾಲಿಕೆಯ ವ್ಯಾಪ್ತಿಯಲ್ಲಿ ರಸ್ತೆ ಕತ್ತರಿಸುವ ಅನುಮತಿ ನೀಡುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ನಿರ್ವಹಿಸಲು ವ್ಯವಸ್ಥೆ ಮಾಡಿರುವ ಹಿನ್ನೆಲೆಯಲ್ಲಿ ಅನಧಿಕೃತವಾಗಿ ರಸ್ತೆ ಕತ್ತರಿಸಿ ಹಾಳುಗೆಡಹುವ ಪ್ರವೃತ್ತಿಯನ್ನು ನಿಯಂತ್ರಿಸಲು ಜುಲ್ಮಾನೆ ನಿಯಮಾವಳಿಗಳನ್ನು ರೂಪಿಸಬೇಕಿರುತ್ತದೆ.

ಈ ಬಗ್ಗೆ ಹಲವಾರು ಸಂದರ್ಭಗಳಲ್ಲಿ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದ್ದು, ಸದರಿ ಜುಲ್ಮಾನೆ ನಿಯಮಾವಳಿಯನ್ನು ರೂಪಿಸಿ ನಗರದ ಸಾರ್ವಜನಿಕ ರಸ್ತೆಗಳನ್ನು ಕತ್ತರಿಸಿ ಹಾಳುಗೆಡಹುವ ಮತ್ತು ಸುಗಮ ಸಂಚಾರಕ್ಕೆ ತೊಡಕನ್ನುಂಟುಮಾಡುವ ಸಮಾಜಘಾತುಕ ಶಕ್ತಿಗಳ ನಿಯಂತ್ರಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪಾಲಿಕೆಗೆ ಸೂಚಿಸಲಾಗಿರುತ್ತದೆ.

ಅದರಂತೆ ಆಯುಕ್ತರು, ಬಿಬಿಎಂಪಿ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ 210 ಎಂಎನ್‌ವೈ 2017,
ಬೆಂಗಳೂರು, ದಿನಾಂಕ: 10.12.2018.

1. ಕರ್ನಾಟಕ ಮುನಿಸಿಪಲ್ ಕಾರ್ಪೋರೇಶನ್ ಕಾಯ್ದೆ 1976ರ ಅನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲ ಸಾರ್ವಜನಿಕ ರಸ್ತೆಗಳ ಒಡೆತನ ಮತ್ತು ಮೇಲುಸ್ತುವಾರಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರದತ್ತವಾಗಿರುತ್ತದೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ರಸ್ತೆಗಳಲ್ಲಿ ಯಾವುದೇ ಭೂಗತ ಅಥವಾ ಮೇಲ್ಮಟ್ಟದ ಮೂಲಸೌಕರ್ಯ ಅಳವಡಿಕೆಗೆ ಅನುಮತಿ ನೀಡುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಏಕೈಕ ಸಕ್ಷಮ ಪ್ರಾಧಿಕಾರವಾಗಿರುತ್ತದೆ.

2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ರಸ್ತೆಗಳಲ್ಲಿ ಯಾವುದೇ ಸರಕಾರಿ ಅಥವಾ ಖಾಸಗಿ ಸಂಸ್ಥೆಯು ತನ್ನ ಸಂಸ್ಥೆಯ/ಇತರ ಸಂಸ್ಥೆಗಳ ಭೂಗತ ಅಥವಾ ಮೇಲ್ಮಟ್ಟದ ಮೂಲಸೌಕರ್ಯ ಅಳವಡಿಕೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮತಿಯನ್ನು ಪಾಲಿಕೆಯು ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ ಆನ್‌ಲೈನ್ ಮೂಲಕ ಪಡೆಯುವುದು ಕಡ್ಡಾಯವಾಗಿರುತ್ತದೆ.

3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಡೆಯುವ ಮೂಲಸೌಕರ್ಯ ಅಳವಡಿಕೆ ಅನುಮತಿಯು ಸಂಬಂಧಪಟ್ಟ ಮನವಿಗೆ ಮಾತ್ರ ಸೀಮಿತವಾಗಿರುತ್ತದೆ. ಪಾಲಿಕೆಯ ಅನುಮತಿ ಪಡೆದು ಅಳವಡಿಸಲಾಗಿರುವ ಮೂಲಸೌಕರ್ಯ ಪಥಗಳಲ್ಲಿ ಅನುಮತಿ ಪಡೆದಿರುವ ಸರ್ಕಾರಿ ಅಥವಾ ಖಾಸಗಿ ಮೂಲಸೌಕರ್ಯ ಸಂಸ್ಥೆಗಳು ತದನಂತರದಲ್ಲಿ ತಮ್ಮ ಸಂಸ್ಥೆಯ/ಇತರ ಸಂಸ್ಥೆಗಳ ಭೂಗತ ಅಥವಾ ಮೇಲ್ಮಟ್ಟದ ಮೂಲಸೌಕರ್ಯ ಡಕ್ಟ್, ಕೊಳವೆ ಮತ್ತು ಕೇಬಲ್‌ಗಳ ಹೆಚ್ಚುವರಿ ಅಳವಡಿಕೆಗೆ ಇಚ್ಛಿಸಿದಲ್ಲಿ, ಹೆಚ್ಚುವರಿ ಅಳವಡಿಕೆಗೆ ಸಂಬಂಧಿಸಿದಂತೆ ಪಾಲಿಕೆಯ ಅನುಮತಿಯನ್ನು ಆನ್‌ಲೈನ್ ಮೂಲಕ ಹೆಚ್ಚುವರಿಯಾಗಿ ಪಾಲಿಕೆಯು ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ ಪಡೆಯುವುದು ಕಡ್ಡಾಯವಾಗಿರುತ್ತದೆ.

4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೇಲ್ಕಾಣಿಸಿದಂತೆ ಶುಲ್ಕವನ್ನು ವಿಧಿಸುವಾಗ ಸಂಸ್ಥೆಗಳು ಸದರಿ ಅಳವಡಿಕೆಗೆ ಮುನ್ನ ಓ.ಎಫ್.ಸಿ. ಅಥವಾ ಪೋಲ್ ಅಥವಾ ಇತರ ಅಳವಡಿಕೆ ಅನುಮತಿಯನ್ನು ಇದೇ ಸ್ಥಳಗಳಿಗೆ ಪಡೆದುಕೊಂಡಿದ್ದಲ್ಲಿ ಮತ್ತು ಈ ಬಗ್ಗೆ ದಾಖಲೆ ಹಾಗೂ ಮನವಿಯನ್ನು ಸಂಸ್ಥೆಗಳು ಸಲ್ಲಿಸಿದಲ್ಲಿ, ಅಂತಹ ಅನುಮತಿಗಳಿಗೆ ಈಗಾಗಲೇ ಪಾಲಿಕೆಗೆ ಪ್ರತಿ ಮೀ. ಉದ್ದದ ಅಳವಡಿಕೆಗೆ ಪಾವತಿಸಿರುವ ಅಳವಡಿಕೆ ಶುಲ್ಕದ ಮೊತ್ತವನ್ನು ಮಾತ್ರ ಹೊಂದಾಣಿಕೆ ಮಾಡುವುದು. ಅಲ್ಲದೇ ಪರವಾನಿಗೆಗಾಗಿ ಪಾಲಿಕೆಯನ್ನು ಹೊರತುಪಡಿಸಿ ಇತರ ಸ್ಥಳೀಯ, ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಿಗೆ ಪಾವತಿಸಿರುವ ಮೊತ್ತವನ್ನು ಪರಿಗಣಿಸುವಂತಿಲ್ಲ.

5. ಪಾಲಿಕೆಯ ಪರವಾನಗಿಯೊಂದಿಗೆ ಓ.ಎಫ್.ಸಿ.ಯನ್ನು ಭೂಗತವಾಗಿ ಅಳವಡಿಸಿ ಕಾರಣಾಂತರಗಳಿಂದ ಓ.ಎಫ್.ಸಿ. ತುಂಡಾಗಿದ್ದು ದುರಸ್ತಿ ಸಾಧ್ಯವಾಗದ ಪಕ್ಷದಲ್ಲಿ ಹೊಸದಾಗಿ ಓ.ಎಫ್.ಸಿ. ಡಕ್ಟ್ ಅಳವಡಿಸಲೇ ಬೇಕಿದ್ದಲ್ಲಿ ಡಕ್ಟ್‌ಗೆ ನಿಗದಿತ ಪರವಾನಗಿ ಶುಲ್ಕ, ಮೇಲ್ವಿಚಾರಣೆ ಶುಲ್ಕ ಮತ್ತು ಭದ್ರತಾ ಠೇವಣಿ ಹೊಸದಾಗಿ ಪಡೆದು ಪರವಾನಗಿ ನೀಡುವುದು.

6. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಕೊಳವೆ ಮತ್ತು ಕೇಬಲ್ ಅಳವಡಿಕೆ ಸಾಧ್ಯವಾಗದ ಸಂದರ್ಭಗಳಲ್ಲಿ ಓಪನ್ ಟ್ರೆಂಚ್ ವಿಧಾನದಲ್ಲಿ ಪ್ರತಿ ಮೀಟರಿಗೆ ರೂ.1857/- ಅಳವಡಿಕೆ ಶುಲ್ಕ ಹಾಗೂ ಅನ್ವಯವಾಗುವ ಇತರ ಶುಲ್ಕ ಮತ್ತು ಠೇವಣಿಗಳನ್ನು ಪಡೆದುಕೊಂಡು ಅನುಮತಿ ನೀಡುವುದು. ಬೆಸ್ಕಾಂ ಸಂಸ್ಥೆಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಕೇಬಲ್ ಅಳವಡಿಕೆಗೆ ಅನುಮತಿ ನೀಡುವ ಸಂದರ್ಭದಲ್ಲಿ ಹೆಚ್.ಡಿ.ಡಿ. ಮಾದರಿಯಲ್ಲಿ ಕೇಬಲ್ ಅಳವಡಿಸಲು ನಾನ್-ಟೆಲಿಕಾಂ ಸಂಸ್ಥೆಗಳಿಗೆ ಹೆಚ್.ಡಿ.ಡಿ. ಮಾದರಿಯಲ್ಲಿ ಕೇಬಲ್ ಅಳವಡಿಸಲು ನಿಗದಿಪಡಿಸಿರುವ ಶುಲ್ಕವನ್ನು ಪಡೆದುಕೊಂಡು ಅನುಮತಿ ನೀಡುವುದು.

7. ಪಾಲಿಕೆ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಕೊಳವೆ ಮತ್ತು ಕೇಬಲ್‌ಗಳನ್ನು ಅಳವಡಿಸಲು ರಸ್ತೆ ಅಗೆತಕ್ಕೆ ಅನುಮತಿಯನ್ನು (ಅ) ಎಲ್ಲ ಸರಕಾರಿ ಮೂಲಸೌಲಭ್ಯ ಸಂಸ್ಥೆಗಳು ಪಾಲಿಕೆಯ Multi-Agency Road Cutting Coordination System ತಂತ್ರಾಂಶದಲ್ಲಿ (ಆ)ಸಾರ್ವಜನಿಕರು ಮತ್ತು ಖಾಸಗಿ ಸಂಸ್ಥೆಗಳು ತಮ್ಮ ಮನೆ, ವಸತಿ ಸಮುಚ್ಚಯ ಮತ್ತು ವಾಣಿಜ್ಯ ಕಟ್ಟಡಗಳ ನೀರು, ಒಳಚರಂಡಿ ಮತ್ತು ವಿದ್ಯುತ್ ಸರಬರಾಜಿಗೆ ಸಂಬಂಧಪಟ್ಟಂತೆ ರಸ್ತೆ ಕತ್ತರಿಸುವ ಮನವಿಗಳನ್ನು (ಬೆಸ್ಕಾಂ ಸಂಸ್ಥೆಯವರು ಸಾರ್ವಜನಿಕರಿಗೆ ಅನುಮತಿಸುವ Self Execution ಕಾಮಗಾರಿಗಳೂ ಸೇರಿದಂತೆ) "ಬಿ.ಬಿ.ಎಂ.ಪಿ – ನಾಗರೀಕ ಸೇವೆಗಳು – ರಸ್ತೆ ಅಗೆಯಲು ಆನ್‌ಲೈನ್ ಅನುಮತಿ ವ್ಯವಸ್ಥೆ" ಮುಖಾಂತರ ಹಾಗೂ (ಇ) ಓ.ಎಫ್.ಸಿ. ಸಂಸ್ಥೆಗಳು ಪಾಲಿಕೆಯ ಓ.ಎಫ್.ಸಿ.-ಜಿ.ಐ.ಎಸ್. ಜಾಲತಾಣದಲ್ಲಿ ಮನವಿ ಸಲ್ಲಿಸಿ ಪಾಲಿಕೆಯು ನಿಗದಿಪಡಿಸಿರುವ ಶುಲ್ಕವನ್ನು ಪಾವತಿ ಮಾಡಿ ಕಡ್ಡಾಯವಾಗಿ ಅನುಮತಿ ಪಡೆಯತಕ್ಕದ್ದು.

8. ಗ್ಯಾಸ್ ಪೈಪ್‌ಲೈನ್‌ನಿಂದ ಅನಿಲ ಸೋರಿಕೆಯಾದ ಸಂದರ್ಭದಲ್ಲಿ ಸಂಬಂಧಪಟ್ಟ ಸರಕಾರಿ ಮೂಲಸೌಲಭ್ಯ ಸಂಸ್ಥೆಗಳು ತಕ್ಷಣದಲ್ಲಿ ತುರ್ತು ದುರಸ್ತಿ ಕೈಗೊಳ್ಳಲು, ಅಗತ್ಯವಿದ್ದಲ್ಲಿ ಸೋರಿಕೆ ಸ್ಥಳದಲ್ಲಿ ರಸ್ತೆ ಕತ್ತರಿಸಲು ಅವಕಾಶ ಕಲ್ಪಿಸಿದ್ದು ಸದರಿ ತುರ್ತು ದುರಸ್ತಿಗಳಿಗೆ ಪಾಲಿಕೆಯ ಘಟನೋತ್ತರ ಅನುಮತಿಯನ್ನು ಆನ್‌ಲೈನ್ ಮುಖಾಂತರ ಕಡ್ಡಾಯವಾಗಿ ಪಡೆಯತಕ್ಕದ್ದು.

ಉಳಿದಂತೆ ಇತರ ತುರ್ತು ಮೂಲಸೌಲಭ್ಯ ದುರಸ್ತಿಗಳಿಗಾಗಿ ಸಂಬಂಧಪಟ್ಟ ಸರಕಾರಿ ಸಂಸ್ಥೆಗಳು <u>MARCCS</u> ತಂತ್ರಾಂಶದಲ್ಲಿ ಮನವಿ ಸಲ್ಲಿಸಿ ತ್ವರಿತ ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸಿದ್ದು ಸದರಿ ತುರ್ತು ದುರಸ್ತಿಗಳಿಗೆ ಪಾಲಿಕೆಯ ಘಟನೋತ್ತರ ಅನುಮತಿಯನ್ನು ಆನ್‌ಲೈನ್ ಮುಖಾಂತರ ಕಡ್ಡಾಯವಾಗಿ ಪಡೆಯತಕ್ಕದ್ದು.

9. ಮೂಲಸೌಕರ್ಯ ಸಂಸ್ಥೆಗಳು ನಿರೀಕ್ಷಿತ ಗುಣಮಟ್ಟದಲ್ಲಿ ರಸ್ತೆ ಪುನರ್ನಿರ್ಮಾಣ ವೆಚ್ಚವನ್ನು ಕಡ್ಡಾಯವಾಗಿ ಅಂದಾಜು ವೆಚ್ಚದಲ್ಲಿ ಸೇರಿಸತಕ್ಕದ್ದು. ಪುನರ್ನಿರ್ಮಾಣದ ಅಂದಾಜು ವೆಚ್ಚ ಮತ್ತು ವಾಸ್ತವಿಕ ವೆಚ್ಚದಲ್ಲಿ ಕೊರತೆಯಿದ್ದರೆ ಸದರಿ ವೆಚ್ಚವನ್ನು ರಸ್ತೆ ಕತ್ತರಿಸುವ ಸಂಸ್ಥೆಗಳೇ ಭರಿಸತಕ್ಕದ್ದು. ಇಂತಹ ಅನಿರೀಕ್ಷಿತ ಹೆಚ್ಚುವರಿ ವೆಚ್ಚಗಳಿಗಾಗಿ ಸಂಸ್ಥೆಗಳ ವಾರ್ಷಿಕ ಆಯವ್ಯಯ ಅಂದಾಜಿನಲ್ಲೇ ವಿಶೇಷ ಪೂರ್ವಹಂಚಿಕೆ ಇರತಕ್ಕದ್ದು.

10. ರಸ್ತೆ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಮೂಲಸೌಕರ್ಯಗಳನ್ನು ಸ್ಥಳಾಂತರಿಸುವ ಅಗತ್ಯ ಕಂಡುಬಂದಲ್ಲಿ ಸ್ಥಳಾಂತರಿಸಿ ಸ್ಥಾಪಿಸಬೇಕಿರುವ ಮೂಲಸೌಕರ್ಯವನ್ನು ಮೇಲ್ದರ್ಜೆಗೆ ಏರಿಸಿ ಅಂತಹ ವೆಚ್ಚವನ್ನು ಸಹ, ಮೂಲಸೌಕರ್ಯ ಸ್ಥಳಾಂತರ ವೆಚ್ಚದಲ್ಲಿ ಸೇರಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೋರಲಾಗುತ್ತಿರುವುದು ಕಂಡುಬಂದಿರುತ್ತದೆ. ಯಾವುದೇ ಸಂದರ್ಭದಲ್ಲಿ ಮೂಲಸೌಕರ್ಯವನ್ನು ಮೇಲ್ದರ್ಜೆಗೆ ಏರಿಸುತ್ತಿದ್ದಲ್ಲಿ ಅದಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಮೂಲಸೌಕರ್ಯ ಸಂಸ್ಥೆಯಿಂದಲೇ ಭರಿಸುವುದು.

11. ರಸ್ತೆ ಕತ್ತರಿಸುವ ಪ್ರಕ್ರಿಯೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಡೆಯತಕ್ಕದ್ದು ಮತ್ತು ನಡೆಯುತ್ತಿರುವ ಕೆಲಸದ ಬಗ್ಗೆ ವಿವರಗಳುಳ್ಳ ಫಲಕಗಳನ್ನು ಕೆಲಸ ನಡೆಯುತ್ತಿರುವ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು.

12. ಅನುಮತಿಯಿಲ್ಲದೇ ರಸ್ತೆ ಕತ್ತರಿಸಿರುವ ಸಂಸ್ಥೆಗಳಿಂದ ರಸ್ತೆ ಪುನರ್ ನಿರ್ಮಾಣ ಮಾಡಿಸುವುದಲ್ಲದೆ ಪ್ರತಿ ಘಟನೆಗೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ರಸ್ತೆ ರೂ.25 ಲಕ್ಷ ಮತ್ತು ಸಾರ್ವಜನಿಕರಿಗೆ ರೂ.10 ಲಕ್ಷ ದಂಡ ವಿಧಿಸುವುದು.

13. ಯಾವುದೇ ಸಂದರ್ಭಗಳಲ್ಲಿ ಕೂಡ ಪಾಲಿಕೆಯ ಆಯುಕ್ತರ ವಿಶೇಷ ಅನುಮತಿಯಿಲ್ಲದೆ ಹೊಸದಾಗಿ ಡಾಂಬರೀಕರಣಗೊಳಿಸಿರುವ ರಸ್ತೆಗಳನ್ನು ಕತ್ತರಿಸುವುದನ್ನು ನಿಷೇಧಿಸಿದೆ. ರಸ್ತೆಗಳಲ್ಲಿ ಡಾಂಬರೀಕರಣದ ಪೂರ್ವದಲ್ಲೇ ರಸ್ತೆ ಕತ್ತರಿಸುವ ಅನುಮತಿ ದೊರೆತಿದ್ದರೂ ಕೂಡ ಅನುಮತಿ ದೊರೆತು ರಸ್ತೆ ಕತ್ತರಿಸುವ ಮೊದಲೇ ರಸ್ತೆ ಡಾಂಬರೀಕರಣ ಕೈಗೊಂಡರೆ, ಪಡೆದಿರುವ ಅನುಮತಿ ಕೂಡಲೇ ಅಸಿಂಧುವಾಗುತ್ತದೆ. ಇದನ್ನು ಉಲ್ಲಂಘಿಸಿ ಹೊಸದಾಗಿ ಡಾಂಬರೀಕರಣಗೊಳಿಸಿರುವ ರಸ್ತೆಯನ್ನು ಕತ್ತರಿಸಿದರೆ ರಸ್ತೆ ಕತ್ತರಿಸಿರುವ ಸಂಸ್ಥೆಗಳಿಂದ ರಸ್ತೆ ಪುನರ್ ನಿರ್ಮಾಣ ಮಾಡಿಸುವುದಲ್ಲದೆ ಪ್ರತಿ ಘಟನೆಗೆ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ರಸ್ತೆ ರೂ.25 ಲಕ್ಷ ಮತ್ತು ಸಾರ್ವಜನಿಕರಿಗೆ ರೂ.10 ಲಕ್ಷ ದಂಡ ವಿಧಿಸುವುದು.

14. ಓ.ಎಫ್.ಸಿ. ಅನುಮತಿ ಪತ್ರಗಳಲ್ಲಿ ನಿಗದಿಪಡಿಸಿರುವ ಸಂಖ್ಯೆಯ ಹೆಚ್.ಡಿ.ಡಿ. ಅಳವಡಿಕೆ ಗುಂಡಿಗಳಿಗಿಂತ ಹೆಚ್ಚು ಗುಂಡಿಗಳನ್ನು ತೋಡುವುದು, ನಿಗದಿಯಾದ ಉದ್ದಕ್ಕಿಂತ ಹೆಚ್ಚಿಗೆ ಓ.ಎಫ್.ಸಿ ಅಳವಡಿಸುವುದು, ರಸ್ತೆ ಪುನಶ್ಚೇತನದ ಜವಾಬ್ದಾರಿ ಹೊಂದಿರುವ ಸಂಸ್ಥೆಯು (ಓ.ಎಫ್.ಸಿ. ಸಂಸ್ಥೆ ಅಥವಾ ಪಾಲಿಕೆಯ ಗುತ್ತಿಗೆದಾರರು) ಓ.ಎಫ್.ಸಿ. ಅಳವಡಿಕೆ ಪೂರ್ಣಗೊಂಡ 96 ಘಂಟೆಗಳಲ್ಲಿ ಹೆಚ್.ಡಿ.ಡಿ ಅಳವಡಿಕೆ ಗುಂಡಿಗಳ ರಸ್ತೆ ಪುನಶ್ಚೇತನ ಪೂರ್ಣಗೊಳಿಸದಿರುವುದು, ಓ.ಎಫ್.ಸಿ. ಅಳವಡಿಕೆ ಅನುಮತಿ ಪಡೆದಿರುವ ಸಂದರ್ಭಗಳಲ್ಲಿ ಜುರಿಸ್‌ಡಿಕ್ಷನಲ್ ಇಂಜಿನಿಯರ್‌ಗಳಿಗೆ ಲಿಖಿತ ಪೂರ್ವಮಾಹಿತಿ ನೀಡದಿರುವುದು, ಹೆಚ್.ಡಿ.ಡಿ. ಮಾದರಿಯಲ್ಲಿ ಅನುಮತಿ ಪಡೆದು ಓ.ಎಫ್.ಸಿ. ಅಳವಡಿಕೆಯನ್ನು ಓಪನ್ ಟ್ರೆಂಚ್ ಮಾದರಿಯಲ್ಲಿ ಮಾಡುವುದು, ಪೂರ್ವಾನುಮತಿ ಪಡೆದು ರಸ್ತೆ ಕತ್ತರಿಸಿರುವ ಆದರೆ ಕತ್ತರಿಸಿದ ಭಾಗಗಳ ಪುನರ್ ನಿರ್ಮಾಣ ನಿಗದಿತ ವಿಶಿಷ್ಟ ವಿವರಣೆಯಂತೆ ಮಾಡದಿರುವುದು, ರಸ್ತೆಕತ್ತರಿಸುವ ಅನುಮತಿಯ ಕಾಲಮಿತಿ ಮೀರಿದ ನಂತರ ರಸ್ತೆಕತ್ತರಿಸುವುದು ಮತ್ತು ಪರವಾನಗಿಯ ಇತರ ಯಾವುದೇ ಷರತ್ತುಗಳನ್ನು ಉಲ್ಲಂಘಿಸುವ ಸಂಸ್ಥೆಗಳಿಗೆ ಪಾಲಿಕೆ ನಿಗದಿಪಡಿಸಿರುವ ದಂಡವನ್ನು ವಿಧಿಸುವುದು ಮತ್ತು ಅನ್ವಯವಾಗುವಲ್ಲಿ ರಸ್ತೆಯ ಪೂರ್ಣ ಅಗಲಕ್ಕೆ ರಸ್ತೆ ಪುನರ್ ನಿರ್ಮಾಣ ಶುಲ್ಕವನ್ನು ಸಹ ತಪ್ಪಿತಸ್ಥ ಸಂಸ್ಥೆಯವರಿಂದ ವಸೂಲು ಮಾಡುವುದು.

15. ಅನಧಿಕೃತವಾಗಿ ಭೂಮಿಯ ಮೇಲ್ಮಟ್ಟದಲ್ಲಿ ಅಥವಾ ಭೂಗತವಾಗಿ ಓ.ಎಫ್.ಸಿ ಅಳವಡಿಸಿರುವುದು ಕಂಡುಬಂದಲ್ಲಿ ಪ್ರತಿ ಮೀಟರಿಗೆ ನಿಗದಿತ ಶುಲ್ಕದ ಮೂರುಪಟ್ಟು ದಂಡ ವಸೂಲು ಮಾಡುವುದು.

16. ಹೆಚ್.ಡಿ.ಡಿ. ಮಾದರಿಯಲ್ಲಿ ಓ.ಎಫ್.ಸಿ ಅಳವಡಿಕೆಗಾಗಿ ರಸ್ತೆ ಘುತ್ತು ಪಾದಚಾರಿ ಮಾರ್ಗಗಳಲ್ಲಿ ಗುಂಡಿಗಳನ್ನು ತೋಡಲಾಗುತ್ತಿದ್ದು ಓ.ಎಫ್.ಸಿ. ಅಳವಡಿಕೆಯ ನಂತರ ಸದರಿ ಗುಂಡಿಗಳ ರಸ್ತೆಭಾಗಗಳನ್ನು ಪ್ರಸಕ್ತದಲ್ಲಿ ಸಂಬಂಧಪಟ್ಟ ಸಂಸ್ಥೆಯವರೇ ಪುನರ್ ನಿರ್ಮಿಸುತ್ತಿದ್ದಾರೆ, ರಸ್ತೆ ಪುನರ್ ನಿರ್ಮಾಣದ ಗುಣಮಟ್ಟವನ್ನು ಕಾಯ್ದುಕೊಳ್ಳುವ ಮತ್ತು ನಿಗದಿತ ಕಾಲದಲ್ಲಿ ರಸ್ತೆ ಪುನರ್ ನಿರ್ಮಾಣವನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಪಾಲಿಕೆಯೇ ಕೇಂದ್ರೀಕೃತ ವ್ಯವಸ್ಥೆಯಲ್ಲಿ ರಸ್ತೆ ಪುನರ್ ನಿರ್ಮಾಣದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಬಗ್ಗೆ ಗುತ್ತಿಗೆದಾರರನ್ನು ನೇಮಿಸಲಾಗಿರುತ್ತದೆ. ರಸ್ತೆ ಪುನಶ್ಚೇತನಕ್ಕೆ ನಿಗದಿಗೊಳಿಸುವ ಶುಲ್ಕವನ್ನು ಸಂಸ್ಥೆಗಳಿಂದ ಅನುಮತಿ ನೀಡುವ ಸಮಯದಲ್ಲೇ ಭರಿಸಿಕೊಂಡು ಪಾಲಿಕೆ ವತಿಯಿಂದಲೇ ರಸ್ತೆ ಭಾಗ ಪುನರ್ ನಿರ್ಮಾಣ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಎ. ಹಿದಾಯತ್ತುಲ್ಲ 10/12/2018
(ಕೆ.ಎ. ಹಿದಾಯತ್ತುಲ್ಲ)
ಸರ್ಕಾರದ ಉಪ ಕಾರ್ಯದರ್ಶಿ-3,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು (A&E),ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಬಿ.ಎಂ.ಆರ್.ಸಿ.ಎಲ್.
8) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
10) ಅಧ್ಯಕ್ಷರು, ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬೆಂಗಳೂರು.
